ಸಾಕ್ಷಿಯನ್ನು ದಿನಾಂಕ:**17.02.2024** ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃಆರೋಪಿ ಪರ ಶ್ರೀ.ವೈ.ಆರ್.ಹೆಚ್. ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಬರೆಯಲು ಓದಲು ಬರುತ್ತದೆ. ನಾನು 30 ವರ್ಷಗಳಿಂದಲೂ ಟೆಂಟ್ ಹೌಸ್ ಮಾಡುತ್ತಿರುತ್ತೇನೆ. ನನಗೆ ಒಂದೇ ಕಡೆ ಟೆಂಟ್ ಹೌಸ್ ಇರುತ್ತದೆ. ಟೆಂಟ್ ಹೌಸ್‌ನ ವಿಳಾಸಃಶ್ರೀ ಮಂಜುನಾಥ ಟೆಂಟ್ ಹೌಸ್, ಈಶ್ವರ ದೇವಸ್ಥಾನ ಮುಂಭಾಗ, ಸಂತೆಬೀದಿ ಕೋಟೆ, ಕುಣಿಗಲ್ ಆಗಿರುತ್ತದೆ. ಅದರ ಮಾಲೀಕ ನಾನೇ ಆಗಿರುತ್ತೇನೆ. ನಾನು ಸಂಬಂಧಿಸಿದ ಇಲಾಖೆಯಿಂದ ಟಿನ್ ನಂಬರ್ ನ್ನು ಪಡೆದಿರುವುದಿಲ್ಲ. ಟೆಂಟ್ ಹೌಸ್‌ಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳನ್ನು ಇಟ್ಟಿರುತ್ತೇನೆ. ಟೆಂಟ್ ಹೌಸ್ ಆದಾಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆಯನ್ನು ಪಾವತಿಸಿರುತ್ತೇನೆ. ಅದರ ದಾಖಲಾತಿಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನನಗೆ 5-6 ಬ್ಯಾಂಕಗಳಲ್ಲಿ ಖಾತೆ ಇರುತ್ತದೆ. ಶ್ರೀ ಮಂಜುನಾಥ ಟೆಂಟ್ ಹೌಸ್ ಹೆಸರಿನಲ್ಲಿ ಕೆನರಾ ಬ್ಯಾಂಕನಲ್ಲಿ ಚಾಲ್ತಿ ಖಾತೆ ಇರುತ್ತದೆ. ಉಳಿದ ಕಡೆ ಉಳಿತಾಯ ಖಾತೆ ಇರುತ್ತದೆ. ನಾನು ಬ್ಯಾಂಕ್ ನಲ್ಲಿ ಸಾಲ ಪಡೆದಿರುತ್ತೇನೆ ಮತ್ತು ಅದನ್ನು ತೀರಿಸಿರುತ್ತೇನೆ. ಟೆಂಟ್ ಹೌಸ್ ಬಾಬ್ತು ಬರುವ ಆದಾಯ ನೇರವಾಗಿ ನನ್ನ ಅಕೌಂಟ್ಗೆ ಜಮಾ ಆಗುತ್ತಾವಾ ಅಂದರೆ ಸರ್ಕಾರದಿಂದ ಚೆಕ್ ನೀಡಿದಾಗ ನೇರ ಬ್ಯಾಂಕಿಗೆ ಹೋಗುತ್ತದೆ. ಉಳಿದವರು ಕೆಲವು ಬಾರಿ ನಗದಾಗಿ ಹಣ ನೀಡುವುದರಿಂದ ನಗದಾಗಿ

ಸ್ವೀಕರಿಸಿರುತ್ತೇನೆ. ನಮ್ಮ ಖಾತೆಗೆ ಖಾಸಗಿ ವ್ಯಕ್ತಿಗಳು ಕೆಲವು ಬಾರಿ ನೇರವಾಗಿ ಅಕೌಂಟ್ ಗೆ ಆರ್.ಟಿ.ಜಿ.ಎಸ್. ಮಾಡಿರುತ್ತಾರೆ. ನಾನು ಕೆಲವರಿಗೆ ಹಣ ನೀಡಬೇಕಾದರೆ ಕೆಲವು ಬಾರಿ ಆರ್.ಟಿ.ಜಿ.ಎಸ್. ಮೂಲಕ ಮಾಡುವ ವಿಧಾನ ನನಗೆ ಗೊತ್ತಿರುತ್ತದೆ. ಯಾವುದಾದರೂ ವಸ್ತುಗಳನ್ನು ಖರೀದಿ ಮಾಡುವ ಸಂದರ್ಭದಲ್ಲಿ ಬೇರೆಯವರ ಖಾತೆಗೆ ನಾನು ಆರ್.ಟಿ.ಜಿ.ಎಸ್. ಮಾಡಿರುತ್ತೇನೆ. ನನ್ನ ಖಾತೆಗೆ ಸಂಬಂಧಿಸಿದಂತೆ ಚೆಕ್ ಪುಸ್ತಕವನ್ನು ಪಡೆದಿರುತ್ತೇನೆ. ನಾನು ಬೇರೆಯವರಿಗೆ ಹಣ ನೀಡಮ ಪಕ್ಷದಲ್ಲಿ ಕೆಲವು ಬಾರಿ ಚೆಕ್ ನೀಡಿರುತ್ತೇನೆ ಮತ್ತು ನಗದಾಗಿ ಸಹ ಹಣ ನೀಡಿರುತ್ತೇನೆ.

ನಾನು ಚೆಕ್ ನೀಡುವಾಗ ಚೆಕ್ ನಲ್ಲಿ ಅವರ ಹೆಸರು ಮತ್ತು ಹಣವನ್ನು ನಮೂದು ಮಾಡಿ ನೀಡುತ್ತೇನೆ ಎಂದರೆ ಸರಿ. ನನ್ನ ಖಾತೆಗೆ ಸಂಬಂಧಿಸಿದಂತೆ ಹೆಚ್ಚಿನ ಹಣವನ್ನು ವರ್ಗಾವಣೆ ಮಾಡುವಾಗ ಖಾತೆಯ ಮೂಲಕ ಮಾಡಬೇಕಾಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ನನ್ನ ಖಾತೆಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು 2010 ರಿಂದ 2015 ರವೆರೆಗೆ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದೆ. ಆ ಸಮಯದಲ್ಲಿ ಟೆಂಟ್ ನ ಮಾಲೀಕನು ಸಹ ನಾನೇ ಆಗಿದ್ದೆ. ಆ ಸಮಯದಲ್ಲಿ ನನ್ನ ವಾರ್ಷಿಕ ಆದಾಯದ ಬಗ್ಗೆ ತೆರಿಗೆ ಪಾವತಿ ಮಾಡಿರುತ್ತೇನೆ. ಸಾಮಾನ್ಯವಾಗಿ ಬೇರೆಯವರಿಗೆ ಹೆಚ್ಚು ಹಣ ನೀಡಿದಾಗ ಅದನ್ನು ತೆರಿಗೆ ಪಾವತಿಯಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. 2021-22 ರಲ್ಲಿ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ಸದರಿ ಆದಾಯ ತೆರಿಗೆ ಪಾವತಿಯಲ್ಲಿ ಆರೋಪಿಗೆ ನೀಡಿರುವ

ಹಣವನ್ನು ನಮೂದು ಮಾಡಿರುವುದಿಲ್ಲ. ನನ್ನ ಆದಾಯ ತೆರಿಗೆ ಪಾವತಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿ ನನಗೆ ಸಂಬಂಧಿಕರಲ್ಲ. ಆದರೆ ಸ್ನೇಹಿತರಾಗಿರುತ್ತಾರೆ. ಆರೋಪಿ ಮೂಲತಃ ಕುಣಿಗಲ್ ವಾಸಿಯಲ್ಲ ಎಂದರೆ ಸರಿ. ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿರುವ ಕಾಲಕ್ಕೆ ನನ್ನ ವ್ಯಾಪ್ತಿಯ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿಲ್ಲ ಎಂದರೆ ಸರಿ. ಆದರೆ ನಮ್ಮ ತಾಲ್ಲೂಕಿನಲ್ಲಿ ಶಿಕ್ಷಕರಾಗಿರುತ್ತಾರೆ. ಅವರು ಯಾವ ಯಾವ ವರ್ಷದಲ್ಲಿ ಎಲ್ಲಿ ಕಾರ್ಯನಿರ್ವಹಿಸಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿಯ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ಸಹೋದರ ಸಹೋದರಿಯರ ಬಗ್ಗೆಯೂ ನನಗೆ ಗೊತ್ತಿಲ್ಲ. ಆರೋಪಿ ಮೊಟ್ಟ ಮೊದಲ ಬಾರಿಗೆ ಯಾವಾಗ ಕುಣಿಗಲ್ ಗೆ ಬಂದು ನೆಲೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಸಹೋದರ ಸಹೋದರಿಯರ ನಡುವೆ ಕುಟುಂಬ ವಿಭಾಗ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಅಥವಾ ಮಕ್ಕಳ ಹೆಸರಿನಲ್ಲಿ ಎಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ಗೊತ್ತಿದೆಯೇ ಎಂದರೆ ಸಾಕ್ಷಿಯು ಆರೋಪಿಯು ಹೆಂಡತಿ ಹೆಸರಿನಲ್ಲಿ ಕುಣಿಗಲ್ ಹೌಸಿಂಗ್ ಬೋರ್ಡ್ ನಲ್ಲಿ ಒಂದು ಮನೆ ಇರುತ್ತದೆ ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಹೆಂಡತಿ ಮತ್ತು ಮಗಳ ಪೂರ್ಣ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯನ್ನು ಮೊಟ್ಟ ಮೊದಲ ಬಾರಿಗೆ ಯಾರು ನಿಮಗೆ ಪರಿಚಯ ಮಾಡಿಕೊಟ್ಟರು ಎಂದರೆ ಸಾಕ್ಷಿಯು ಆರೋಪಿಯು ಶಾಮಿಯಾನ ತೆಗೆದುಕೊಳ್ಳಲು ಬರುತ್ತಿದ್ದರಿಂದ ನನಗೆ ಪರಿಚಯ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ವ್ಯಕ್ತಿಯ ಮೂಲಕ ಆರೋಪಿ ಪರಿಚಯ ಅಗಿರುವುದಿಲ್ಲ ಆದರೆ ನೇರವಾಗಿ ಪರಿಚಯ ಆಗಿರುತ್ತಾರೆ. ನಾವು ಶಾಮಿಯಾನ ನೀಡುವಾಗ ರಿಜಿಸ್ಟರ್ ಮತ್ತು ಪಾವತಿ ರಶೀದಿಯನ್ನು ಕಾಪಾಡುತ್ತೇವೆ. ಆರೋಪಿ ನನ್ನ ಬಳಿ ಶಾಮಿಯಾನ ಪಡೆದುಕೊಂಡ ಬಗ್ಗೆ ರಶೀದಿಗಳು ಇವೆಯೇ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ರಶೀದಿ ಇರುವುದಿಲ್ಲ. ಆದರೆ ಅವರು ಬೇರೆಯವರಿಗೆ ಕೊಡಿಸಿದ್ದರಿಂದ ಅವರ ಹೆಸರಿನಲ್ಲಿ ಇವೆ ಎಂದು ನುಡಿಯುತ್ತಾರೆ. ಆರೋಪಿ ವೀರಣ್ಣಗೌಡರು, ನರಸಿಂಹಮೂರ್ತಿ ಮತ್ತು ಇನ್ನೂ ಕೆಲವರಿಗೆ ಶಾಮಿಯಾನ ಕೊಡಿಸಿರುತ್ತಾರೆ. ಕೆಲವು ಇಲಾಖೆಗಳಿಗೂ ಸಹ ಶಾಮಿಯಾನ ಕೊಡಿಸಿರುತ್ತಾರೆ. ಆ ಸಂಬಂಧ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಹಣ ಸಂದಾಯವಾದ ನಂತರ ಅವುಗಳನ್ನು ಹರಿದು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ತಮ್ಮ ಮನೆಯ ಕಾರ್ಯಕ್ರಮಗಳಿಗಾಗಿ ಶಾಮಿಯಾನ ತೆಗೆದುಕೊಂಡು ಹೋಗಿರುವುದಿಲ್ಲ ಆದರೆ ಅವರ ಒಂದು ಚುನಾವಣೆಗಾಗಿ ಶಾಮಿಯಾನ ಪಡೆದು ಕೊಂಡು ಹೋಗಿರುತ್ತಾರೆ.

ಆರೋಪಿ ಸುಮಾರು 15-20 ವರ್ಷಗಳಿಂದ ಕುಣಿಗಲ್ ಹೌಸಿಂಗ್ ಬೋರ್ಡ್ ನಲ್ಲಿ ವಾಸವಿರುತ್ತಾರೆ. ಅವರು ನನಗೆ 15-20 ವರ್ಷಗಳಿಂದ ಪರಿಚಯವಿರುತ್ತಾರೆ. ನನಗೆ ಪರಿಚಯವಾಗುವ ಪೂರ್ವದಲ್ಲೇ ಅವರು ಅಲ್ಲಿ ಮನೆ ಕಟ್ಟಿದ್ದರು. ಆರೋಪಿ

ಖಾತೆಯಿಂದ ನನ್ನ ಖಾತೆಗಾಗಲೀ ಅಥವಾ ನನ್ನ ಖಾತೆಯಿಂದ ಆರೋಪಿಯ ಖಾತೆಗಾಗಲೀ ಹಣ ವರ್ಗಾವಣೆ ಆಗಿರುವುದಿಲ್ಲ. ಆದರೆ ನಗುದು ಮೂಲಕ ಆಗಿರುತ್ತದೆ. ಯಾವುದೇ ವ್ಯಕ್ತಿಗೆ ಹಣ ನೀಡಿರುವ ಬಗ್ಗೆ ದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ಆಗದೇ ಇರುವುದರಿಂದ ನನ್ನ ಲೆಕ್ಕ ಪುಸ್ತಕದಲ್ಲಾಗಲೀ ಅಥವಾ ದಿನಚರಿಯಲ್ಲಾಗಲೀ ಅದರ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿಗೆ ನೀಡಿರುವ ಹಣದ ಬಗ್ಗೆ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ದಿನಚರಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ದಿನಚರಿಯಲ್ಲಿ ಮುಂದುವರೆದು ಬೇರೆಯವರಿಗೆ ಹಣ ನೀಡಿರುವ ಬಗ್ಗೆಯೂ ಬರೆದಿರುತ್ತೇನೆ.

ಆರೋಪಿ ದಿನಾಂಕಃ10.11.2021 ರಂದು ಹಣ ಕೇಳಿರುತ್ತಾರೆ. ಆರೋಪಿ ಹಣ ಕೇಳಿರುತ್ತಾರೆ ಎಂದು ಹೇಳುವ ದಿನಾಂಕದಂದು ನಾನು ಸಂಜೆ ಹಣ ನೀಡಿರುತ್ತೇನೆ. ಆಗ ಸಮಯ ಸಂಜೆ 5.30 ಆಗಿದ್ದು, ನನ್ನ ಅಂಗಡಿಯಲ್ಲೇ ಹಣ ನೀಡಿರುತ್ತೇನೆ. ನಾನು ಹಣ ನೀಡಿದ್ದೆ ಎಂದು ಹೇಳುವ ಕಾಲಕ್ಕೆ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಾನು ಹಣ ನೀಡಿದ್ದೆ ಎಂದು ಹೇಳುವ ದಿನ ಯಾವ ದಿನ ಎಂದು ನನಗೆ ಗೊತ್ತಿಲ್ಲ. ಆದರೆ ತಾರೀಖು ನೆನಪಿರುತ್ತದೆ. ಸದರಿ ದಿನ ಕಛೇರಿ ದಿನ ಆಗಿರುತ್ತದೆ. ಆರೋಪಿ ಖುದ್ದಾಗಿ ಬೆಳಿಗ್ಗೆ 6.30 ಸಮಯಕ್ಕೆ ಮನೆಯ ಬಳಿ ಬಂದು ತುರ್ತಾಗಿ ಹಣ ಬೇಕೆಂದು ಕೇಳಿರುತ್ತಾರೆ. ನಾನು ಹೇಳುವ ದಿನಾಂಕದಂದು ಆರೋಪಿ ಒಬ್ಬರೇ ಬಂದಿದ್ದರು. ನಾನು ಹಣ ನೀಡಿದ್ದೆ ಎಂದು ಹೇಳುವ ಕಾಲಕ್ಕೆ ಯಾವುದೇ ದಾಖಲಾತಿಗಳನ್ನು

ಪಡೆದುಕೊಂಡಿರುವುದಿಲ್ಲ. ಆ ಸಮಯದಲ್ಲಿ ನಾನು ಭದ್ರತೆಗಾಗಿ ಯಾವುದೇ ದಾಖಲಾತಿಗಳನ್ನು ಕೇಳಿರುವುದಿಲ್ಲ.

ಆರೋಪಿಯಾಗಲೀ ಅಥವಾ ಅವರ ಹೆಂಡತಿಯಾಗಲೀ ಚೀಟಿ ವ್ಯವಹಾರ ನಡೆಸುತ್ತಾರೆ ಎಂಬ ವಿಚಾರ ನನಗೆ ಗೊತ್ತಿರುತ್ತದೆ. ಸೀಗೆಪಾಳ್ಯದ ಶಿವಣ್ಣ ನನಗೆ ಪರಿಚಯವಿರುತ್ತಾರೆ. ಸೀಗೆಪಾಳ್ಯದ ಶಿವಣ್ಣರವರಿಗೂ ಆರೋಪಿಗೂ ಚೀಟಿ ವ್ಯವಹಾರ ನಡೆದಿರುವ ಬಗ್ಗೆ ಗೊತ್ತಿದೆಯೇ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸೀಗೆಪಾಳ್ಯದ ಶಿವಣ್ಣರವರು ನನ್ನ ಆತ್ಮೀಯ ಗೆಳೆಯರಾಗಿರುತ್ತಾರೆ ಎಂದರೆ ಸರಿ. ಅವರ ಮತ್ತು ಆರೋಪಿಯ ನಡುವೆ ಚೀಟಿ ವ್ಯವಹಾರ ನಡೆದಿದೆಯೋ ಇಲ್ಲವೋ ಎಂದು ಅವರನ್ನು ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನಾಗಲೀ ಅಥವಾ ನನ್ನ ಮನೆಯವರಾಗಲೀ ಚೀಟಿ ವ್ಯವಹಾರ ಮಾಡುವುದಿಲ್ಲ ಆದರೆ ನಾವೇ ಬೇರೆ ಕಡೆ ಚೀಟಿ ಹಾಕುತ್ತೇವೆ. ಚೀಟಿ ವ್ಯವಹಾರ ಮಾಡುವಾಗ ಭದ್ರತೆಗಾಗಿ ಚೆಕ್ ಪಡೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಕೆಲವರು ಪಡೆದುಕೊಳ್ಳುತ್ತಾರೆ ಕೆಲವರು ಹಾಗೆ ಕೊಡುತ್ತಾರೆ ಎಂದು ನುಡಿಯುತ್ತಾರೆ. ನಾನು ಚೀಟಿ ಭದ್ರತೆಗಾಗಿ ಯಾವುದೇ ಚೆಕ್ ನ್ನು ನೀಡಿರುವುದಿಲ್ಲ. ಆರೋಪಿ ಚೀಟಿ ಭದ್ರತೆಗಾಗಿ ಬೇರೆಯಾರಿಗಾದರೂ ಚೆಕ್ ನ್ನು ನೀಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಯಾರಿಗಾದರೂ ಚೆಕ್ ನೀಡುವ ಸಮಯದಲ್ಲಿ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಡುತ್ತೇನೆ ಎಂದರೆ ಸರಿ. ಆರೋಪಿ ವಿದ್ಯಾವಂತರಿರುವುದರಿಂದ ಅವರು ತಮ್ಮ ಹಸ್ತಾಕ್ಷರದಲ್ಲಿ ಚೆಕ್ ನ್ನು ಬರೆದುಕೊಡಲು ತೊಂದರೆ ಇಲ್ಲ ಎಂದರೆ ಸರಿ. ನನಗೆ ನೀಡಲಾಗಿದೆ ಎಂದು ಹೇಳುವ ಚೆಕ್ ಆರೋಪಿ ಹಸ್ತಾಕ್ಷರದಲ್ಲಿ ಬರವಣಿಗೆ ಆಗಿತ್ತಾ ಇಲ್ಲವಾ ಎಂದರೆ ಸಾಕ್ಷಿಯು ಅವರು ಅದನ್ನು ಟೈಪ್ ಮಾಡಿಸಿ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಟೈಪ್ ಮಾಡಿಸಿ ಕೊಡಿ ಎಂದು ಕೇಳಿರುವುದಿಲ್ಲ ಆದರೆ ಅವರೇ ತಾಲ್ಲೂಕು ಕಛೇರಿ ಮುಂಭಾಗ ಕರೆದುಕೊಂಡು ಹೋಗಿ ಟೈಪ್ ಮಾಡಿಸಿ ಸಹಿ ಮಾಡಿ ಕೊಟ್ಟಿರುತ್ತಾರೆ. ದಿನಾಂಕಃ17.01.2022 ರಲ್ಲಿ ಬೆಳಿಗ್ಗೆ 9.30 ಕ್ಕೆ ನೀಡಿರುತ್ತಾರೆ. ಟೈಪ್ ಮಾಡಿದವರ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ನಾನು ತಾಲ್ಲೂಕು ಕಛೇರಿಯ ಮುಂದೆ ಇದ್ದೆ. ಆರೋಪಿ ಹೋಗಿ ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ.

ಆರೋಪಿ ನನಗೆ ನೀಡಿರುತ್ತಾರೆ ಎಂದು ಹೇಳುವ ಚೆಕ್ ನ್ನು ಆರೋಪಿ ಕ್ರಾಸ್ ಮಾಡಿ ಕೊಟ್ಟಿರುತ್ತಾರೆ. ಅವರು ಸಹಿ ಮಾಡಿದ ಪೆನ್ ನಲ್ಲೇ ಕ್ರಾಸ್ ಮಾಡಿರುತ್ತಾರೆ. ಆರೋಪಿಗೆ ನಾನು ನೀಡಿರುತ್ತೇನೆ ಎಂದು ಹೇಳುವ ಕಾಲಕ್ಕೆ ಅವರಿಂದ ಭದ್ರತೆಗಾಗಿ ಪ್ರೋನೋಟ್ ಆಗಲೀ ಅಥವಾ ಯಾವುದೇ ಕರಾರು ಪತ್ರವನ್ನು ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಆದರೆ ನಾನು ಮಾಡಿಕೊಂಡಿರುವುದಿಲ್ಲ. ನನ್ನ ದೂರಿನಲ್ಲಾಗಲೀ ಅಥವಾ ನೋಟಿಸ್ ನಲ್ಲಿ ಆರೋಪಿ ಸಾಲ ಕೊಡಬೇಕು ಮತ್ತು ಮಗಳಿಗೆ ಫೀಸ್ ಕಟ್ಟಬೇಕೆಂದು ಹೇಳಿ ಸಾಲ ಪಡೆದಿರುತ್ತಾರೆ ಎಂದು ನಮೂದಿಸಿರುತ್ತೇನೆ. ಅವರು

ಯಾರಿಗೆ ಸಾಲ ನೀಡಬೇಕೆಂದು ನಿಖರವಾಗಿ ನನಗೆ ತಿಳಿಸಿರುವುದಿಲ್ಲ. ಆರೋಪಿ ಸರ್ಕಾರಿ ನೌಕರರಾಗಿರುವುದರಿಂದ ಅವರಿಗೆ ರೂ.50 ರಿಂದ 80 ಸಾವಿರ ಸಂಬಳ ಬರುತ್ತದೆ ಎಂದರೆ ಸರಿ. ಅವರಿಗೆ ಸಾಕಷ್ಟು ಸಂಬಳ ಇರುವುದರಿಂದ ಅವರಿಗೆ ಬೇರೆಯವರ ಬಳಿ ಸಾಲ ಪಡೆಯುವ ಪ್ರಮೇಯ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ19.01.2022 ರಂದು ಬ್ಯಾಂಕ್ ಹಿಂಬರಹ ನೀಡಿರುತ್ತಾರೆ. ಸದರಿ ಬ್ಯಾಂಕ್‌ನ ಹಿಂಬರಹವನ್ನು ಯಥಾವತ್ತಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ19.01.2022 ರ ನಂತರ ನಾವು ಪುನಃ ಬ್ಯಾಂಕಿಗೆ ಹಿಂಬರಹ ಸಂಬಂಧ ಹೋಗಿರುವುದಿಲ್ಲ. ಕೆನರಾ ಬ್ಯಾಂಕ್‌ನ ನನ್ನ ಚಾಲ್ತಿ ಖಾತೆಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ.1 ಚೆಕ್ ನ್ನು ನನ್ನ ಚಾಲ್ತಿ ಖಾತೆಗೆ ಹಾಕಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್